3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು.

**Spl.C. No.539/2023**

ಪ್ರಾ.ಸಾ 5

ಚಾ.ಸಾ 9

| | |
|---|---|
| ಹೆಸರು | ಪುನೀತ್ ಗೌಡ ಸಿ.ಎಸ್ @ ಪುನೀತ್ |
| ತಂದೆಯ ಹೆಸರು | ಶಿವನಂಜೇಗೌಡ |
| ವಯಸ್ಸು | 29 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಚೌಡನಕುಪ್ಪೆ |

ಸಾಕ್ಷಿಯನ್ನು ದಿನಾಂಕ 28.01.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಪಂಚರಿಗೆ ನೀಡಿರುವ ನೋಟೀಸು ಆಗಿದ್ದು ಅದನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

2) ಈಗ ನನಗೆ ತೋರಿಸಿದ ನಿಪಿ.2 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ದಿಃ13.06.2023 ರಂದು ನಮ್ಮ ಊರಿನ ಸರ್ಕಲ್ ನಲ್ಲಿರುವ ಶಿವಾಜಿ ಹೋಟೇಲ್ ಹತ್ತಿರ ಸದರಿ ಸಹಿಗಳನ್ನು ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ.1 ಮತ್ತು 10 ರವರು ಇದ್ದರು. ಆ ಸ್ಥಳಕ್ಕೆ ಪೊಲೀಸರು ಬಂದಿದ್ದರು. ಚಾಸಾ.1 ರವರು ಏನೆಲ್ಲಾ ಆಯಿತು ಎಂದು ಪೊಲೀಸರಿಗೆ ಮಾಹಿತಿಯನ್ನು ನೀಡುತ್ತಿದ್ದರು. ಪೊಲೀಸರು ಸ್ಥಳವನ್ನೆಲ್ಲಾ ನೋಡುತ್ತಿದ್ದರು ಮತ್ತು ಮಹಜರ್ ಸಮಯದಲ್ಲಿ ಬರೆದುಕೊಳ್ಳುತ್ತಿದ್ದರು. ಪೊಲೀಸರು ಒಂದು ನೀಲಗಿರಿ ದೊಣ್ಣೆ ಮತ್ತು ಕೀ

ಬಂಚ್ ನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ನೀಲಗಿರಿ ದೊಣ್ಣೆ ಮತ್ತು ಕೀ ಬಂಚ್ ಸ್ಥಳದಲ್ಲಿಯೇ ಇದ್ದರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ 1 ಮತ್ತು 2 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ.ಪಿ.ಎಂ. ವಕೀಲರಿಂದಃ**

3) ಚೌಡನಕುಪ್ಪೆ ಸರ್ಕಲ್ ನಲ್ಲಿ ಹೆಚ್ಚು ಜನಸಂದಣಿ ಇರುತ್ತದೆ ಎಂದರೆ ಸರಿ. ಚೇತನ್ ಕುಮಾರ್ ರವರು ನಮ್ಮ ಊರಿನಲ್ಲಿ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ. ಅವರು ಮೈಸೂರಿನವರು ಎಂದರೆ ಗೊತ್ತಿಲ್ಲ. ಅವರು ಅಂಗಡಿ ಇದ್ದ ಜಾಗ ಚಾಸಾ.2 ರವರಿಗೆ ಸೇರಿರುತ್ತದೆ ಎಂದರೆ ಸರಿ. ರಸ್ತೆ ಅಗಲೀಕರಣದಲ್ಲಿ ಚಾಸಾ.2 ರವರ ಅಂಗಡಿ ಭೂಸ್ವಾಧೀನಪಡಿಸಿಕೂಂಡಿರುತ್ತಾರೆ ಎಂದರೆ ಸರಿ. ಅದಕ್ಕಿಂತ ಮುಂಚೆ ಚಾಸಾ.2 ರವರು ಚೇತನ್ ಕುಮಾರ್ ರವರಿಗೆ ಅಂಗಡಿಯನ್ನು ಖಾಲಿ ಮಾಡಿಕೊಡುವಂತೆ ಕೇಳುತ್ತಿದ್ದರು ಎಂದರೆ ಗೊತ್ತಿಲ್ಲ.

4) ಪೊಲೀಸರು ನನ್ನ ಸಮಕ್ಷಮ ನಾನು ಮುಖ್ಯ ವಿಚಾಣೆಯಲ್ಲಿ ಹೇಳಿರುವಂತೆ ಯಾವುದೇ ಪಂಚನಾಮೆಯನ್ನು ಮಾಡಿಕೊಂಡಿಲ್ಲ ಮತ್ತು ಮು ಮಾ 1 ಮತ್ತು 2 ನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರಂತಹ ವಸ್ತುಗಳು ಸಾಮಾನ್ಯವಾಗಿ ರಸ್ತೆಗಳ ಮೇಲೆ ಬಿದ್ದಿರುತ್ತವೆ ಎಂದರೆ ಸರಿಯಲ್ಲ. ಚಾಸಾ.1 ರವರು ಆರೋಪಿಗೆ ಹಣ ಬಾಕಿ ಇದ್ದು ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರನ್ನು ಕೊಟ್ಟಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ